ತಾರೀಖು 20ನೆ ಜುಲೈ 1907.

ನಂ. ಜೆ. 219—ಲೆಜಿಸ್. 14-04-14, ಬಂದು ಎಕ್‌ಸ್ಟ್ರಾಡಿಷನ್ ತಪ್ಪಿತಕ್ಕಾಗಿ ಮೈಸೂರು ಸಂಸ್ಥಾನದ ಕ್ರಿಮಿನಲ್ ಕೋರ್ಟಿನ ಫೈನಲ್ ಮೇರೆಗೆ ಮೈಸೂರು ಸೀಮೆಯ ಜೈಲಿನಲ್ಲಿ ಇಡಲ್ಪಟ್ಟ, ಮತ್ತು ಬ್ರಿಟಿಷ್ ಇಂಡಿಯಾವಿನಲ್ಲಿ ಮಾಡಿದ ಎಕ್‌ಸ್ಟ್ರಾಡಿಷನ್ ತಪ್ಪಿತಕ್ಕಾಗಿ ಅಪಾದನೆ ಮಾಡಲ್ಪಟ್ಟ ಒಬ್ಬ ಮನುಷ್ಯನನ್ನು ಬಂದು ಸ್ಥಳದಲ್ಲಿ ಮತ್ತು ಯಾದಿಯಲ್ಲಿ ತೋರಿಸಲ್ಪಟ್ಟ ಒಬ್ಬ ಮನುಷ್ಯನಿಗೆ ಅಥವಾ ಅಧಿಕಾರಿಗೆ ತಂದು ಒಪ್ಪಿಸುವಂತೆ, ಮೈಸೂರು ಸಂಸ್ಥಾನದಲ್ಲಿ ಅಂಥಾ ಮನುಷ್ಯನು ಕೈದಿನಲ್ಲಿಡಲ್ಪಟ್ಟಿರುವ ಬಂದೀಖಾನೆಯ ಚಾರ್ಜಿನಲ್ಲಿರುವ ಅಧಿಕಾರಿಗೆ ಬ್ರಿಟಿಷ್ ಇಂಡಿಯಾವಿನ ಒಬ್ಬ ಮಾಜಿಸ್ಟ್ರೇಟಿಂದ ಅಥವಾ ಲಾಯಖ್ ಅಧಿಕಾರ ಸರಹದ್ದಿನ್ನಳ ಕೋರ್ಟಿನಿಂದ ಯಾದಿಯು ಬಂದರೆ, ಅಂಥಾ ಅಧಿಕಾರಿಯು ಅಂಥಾ ಮನುಷ್ಯನನ್ನು ಸದರೀ ಸ್ಥಳಕ್ಕೆ ಕಳುಹಿಸಿ ಸದರೀ ಯಾದಿಯಲ್ಲಿ ಕಂಡ ಮನುಷ್ಯನಿಗೆ ಅಥವಾ ಅಧಿಕಾರಿಗೆ ಒಪ್ಪಿಸಲ್ಪಡುವಂತೆ ಮಾಡುವುದರ ಮೂಲಕ ಆ ಯಾದಿಯ ಕೋರಿಕೆಯಂತೆ ನಡೆಸಿಕೊಡಬೇಕೆಂದು ಮೈಸೂರು ಶ್ರೀಮನ್ಮಹಾರಾಜರವರು ಹುಕುಂ ದಯಪಾಲಿಸುತ್ತಾರೆ:

ಪರಂತು, ಈ ಕೆಳಗೆ ಹೇಳುವಂತೆ—

(1) ಅಂಥಾ ಪ್ರತಿಯೊಂದು ಯಾದಿಯೂ ಘನವನ್ನೈದಿದ ಮೈಸೂರು ಸೀಮೆಯ ರೆಸಿಡೆಂಟರವರ ಮೂಲಕ ಕಳುಹಿಸಲ್ಪಟ್ಟಿರಬೇಕು.

(2) ಯಾವಿಯು ಯಾವ ಮನುಷ್ಯನಿಗೆ ಸಂಬಂಧಪಟ್ಟಿರುತ್ತದೆಯೋ ಆ ಮನುಷ್ಯನು ಭಾರಿ ಸಜಾ ವಿಧಿಸಲ್ಪಟ್ಟವನಾಗಿದ್ದರೆ, ಅಂಥಾ ಯಾವ ಯಾದಿಯು ಕೋರಿಕೆಯಂತೆಯೂ ನಡೆಸಿಕೊಡಕೂಡದು.

ವಿವರಣೆ—ಈ ಹುಕುಂನಲ್ಲಿ, "ಎಕ್‌ಸ್ಟ್ರಾಡಿಷನ್ ತಪ್ಪಿತ" ಎಂದರೆ 1903ನೆ ಇಸವಿಯ ಇಂಡಿಯನ್ ಎಕ್‌ಸ್ಟ್ರಾಡಿಷನ್ ಆಕ್ಟಿನ (ಸಭಾಸದ್ಮೇತರಾದ ಗವರ್ನರ್ ಜನರಲ್‌ರವರ 1903ನೆ ಇಸವಿಯ 15ನೆ ನಂಬರ್ ಆಕ್ಟಿನ) ಬಂದನೆಯ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟಿಂಥಾ ಯಾವುದಾದರೂ ತಪ್ಪಿತವೆಂದು ಅರ್ಥವಾಗುತ್ತದೆ.

2. ಮೈಸೂರು ಸೀಮೆಯಲ್ಲಿ ತಪ್ಪು ಸಾಬೀತಾಗಿ ಬಂದೀಖಾನೆಯಲ್ಲಿ ಇಡಲ್ಪಟ್ಟು, ಸಜಾ ಅನುಭವಿಸುತ್ತಿರುವ ಮನುಷ್ಯನನ್ನು ಮೇಲೆ ಹೇಳಿದ ಮೇರೆಗೆ ಒಪ್ಪಿಸಿದ ತರುವಾಯ ಬ್ರಿಟಿಷ್ ಇಂಡಿಯಾವಿನಿಂದ ಮೈಸೂರು ಸೀಮೆಗೆ ಅವನನ್ನು ಪುನಃ ವಾಪಸು ಕಳುಹಿಸುವ ತಾರೀಖಿನ ವರಗೆ, ಅವನ ಸಜಾವು ಅಮಾನತ್ತಿನಲ್ಲಿಡಲ್ಪಟ್ಟಿಂತೆ ಭಾವಿಸಲ್ಪಟ್ಟು, ತರುವಾಯ ಸದರಿ ತಾರೀಖಿನಲ್ಲಿ ಪುನಃ ಪ್ರಾರಂಭವಾಗಿ ಅವನನ್ನು ಒಪ್ಪಿಸಿಕೊಟ್ಟ ತಾರೀಖಿನಲ್ಲಿ ಮುಗಿಯದೆ ಉಳಿದಿದ್ದ ಭಾಗದ ಕಾಲದ ಪರ್ಯಂತ ನಡೆಯುತಕ್ಕದ್ದೆಂದೂ ಶ್ರೀಮನ್ಮಹಾರಾಜರವರು ಹುಕುಂ ದಯಪಾಲಿಸಿರುತ್ತಾರೆ.

3. ಯಾವುದಾದರೂ ತಪ್ಪಿತಕ್ಕಾಗಿ ಮೈಸೂರು ಸಂಸ್ಥಾನದ ಕ್ರಿಮಿನಲ್ ಕೋರ್ಟಿನವರ ಫೈನಲ್ ಮೇರೆಗೆ ಮೈಸೂರು ಸಂಸ್ಥಾನದ ಬಂದೀಖಾನೆಯಲ್ಲಿ ಇಡಲ್ಪಟ್ಟಿದ್ದು ಬ್ರಿಟಿಷ್ ಇಂಡಿಯಾವಿನಲ್ಲಿ ಮಾಡಿದ ಎಕ್‌ಸ್ಟ್ರಾಡಿಷನ್ ತಪ್ಪಿತಕ್ಕಾಗಿ ಅನಂತರ ಅಪಾದಿಸಲ್ಪಡಬಹುದಾದ ಯಾವ ಮನುಷ್ಯನ ವಿಷಯದಲ್ಲಾಗಲಿ ಈ ಇನ್ಸ್ತ್ರುಮಾರಿನ ನಿಯಮಗಳು ಸರ್ಕಾರದ ವಿಶೇಷ ಹುಕುಂ ಮೇರೆಗೆ ಲಗಾವಾಗಬಹುದು.

ವಿವರಣೆ.—"ತಪ್ಪಿತ" ಎಂಬ ಮಾತು, ಈ ಪ್ಯಾರಾವಿನಲ್ಲಿ ಪ್ರಥಮತಃ ಬರುವಾಗ, ಬ್ರಿಟಿಷ್ ಇಂಡಿಯಾವಿನಲ್ಲಿ ಮಾಡಲ್ಪಟ್ಟಿದ್ದರೆ ತಪ್ಪಿತವಾಗದೆ ಇರುತ್ತಿದ್ದಂಥಾ ಕಾರ್ಯವನ್ನು ಒಳಗೊಂಡಿರುವುದಿಲ್ಲ.

ತಾರೀಖು 2ನೆ ಆಗಸ್ಟ್ 1907.

ನಂ. 968—ಸ್ಯಾನಿಟರಿ. 171-06-8, 1897ನೆ ಇಸವಿಯ 2ನೆ ನಂಬರ್ ಸಾಂಕ್ರಾಮಿಕ ಉಪದ್ರವಗಳ ರೆಗ್ಯುಲೇಷನಿನ 2ನೆ ಪ್ರಕರಣದ 1ನೆ ಒಳಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, ಪ್ಲೇಗು ತಗುಲಿದ ಯಾವ ಪ್ರದೇಶದಿಂದಲೂ ಮೈಸೂರು ಸಂಸ್ಥಾನದೊಳಕ್ಕೆ ಬಾಸಿದ ನಾರು ಬಟ್ಟೆಯನ್ನೂ, ಉಪಯೋಗಿಸಿದ ಹಾಸಿಗೆಯನ್ನೂ (ಪ್ರಯಾಣೀಕರು ತಮ್ಮ ಸ್ವಂತ ಸಾಮಾನಿನಂತೆ ತೆಗೆದುಕೊಂಡು ಹೋಗುವುದು ಹೊರತು), ಹರಕು ಬಟ್ಟೆಗಳನ್ನೂ ಮತ್ತು ಕರಡು ಕಾಗದಗಳನ್ನೂ ಆಮದು ಮಾಡಕೂಡದೆಂತಲೂ, ಮೈಸೂರು ಸಂಸ್ಥಾನದಲ್ಲಿ ಪ್ಲೇಗು ತಗುಲಿರುವ ಸ್ಥಳಗಳಿಂದ ಅವುಗಳನ್ನು ರಫ್ತು ಮಾಡಕೂಡದೆಂತಲೂ, ಮತ್ತು ಮೈಸೂರು ಸಂಸ್ಥಾನದಲ್ಲಿ ಪ್ಲೇಗು ತಗುಲದೇ ಇರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಸ್ಥಳಗಳಿಂದ ಅಂಥಾ ಸಾಮಾನುಗಳನ್ನು ಸಾಗಿಸಕೂಡದೆಂತಲೂ ನಿಷೇಧಿಸಿ ಹುಕುಂ ದಯಪಾಲಿಸಿರುತ್ತಾರೆ.

ಈ ಇನ್ಸ್ತ್ರುಮಾರ್ನಾವುಗೆ-ವಿರೋಧವಾಗಿ ರಫ್ತು ಮಾಡಲ್ಪಟ್ಟ, ಆಮದು ಮಾಡಲ್ಪಟ್ಟ ಅಥವಾ ಸಾಗಿಸಲ್ಪಟ್ಟ ಮಾಲುಗಳು ಅವುಗಳಿಗೆ ಜವಾಬ್ದಾರರಾದ ಜನರನ್ನು ನಪ್ಪಟಕ್ಕೆ ಗುರಿಮಾಡಿ, ಸ್ಥಳೀಯ ಅಧಿಕಾರಿಗಳಿಂದ ಹಿಡಿಯಲ್ಪಡುವುದಕ್ಕೆ ಅಥವಾ ನಾಶಮಾಡಲ್ಪಡುವುದಕ್ಕೆ ಗುರಿಯಾಗತಕ್ಕದ್ದು.

ಹುಕುಂ ಬಮೋಜೀಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.